# ‘ಪ್ರವಾಸೋದ್ಯಮ ಪುನಶ್ಚೇತನಕ್ಕೆ ‘ಸರ್ವೈವಲ್’, ‘ರಿವೈವಲ್’ ಟಾನಿಕ್’

ಪ್ರವಾಸೋದ್ಯಮ ಪುನಶ್ಚೇತನ ಹಾಗೂ ‘ನೂತನ ಪ್ರವಾಸೋದ್ಯಮ ನೀತಿ’ಗೆ ಸಂಬಂಧಿಸಿದಂತೆ ಪ್ರವಾಸೋದ್ಯಮ ಸಚಿವ ಸಿ.ಟಿ.ರವಿ ಸಂದರ್ಶನ

■ ಬಿ.ಜೆ. ಧನ್ಯಪ್ರಸಾದ್



◆ **ಕೋವಿಡ್ ನಡುವೆ ಪ್ರವಾಸೋದ್ಯಮ ಪುನಶ್ಚೇತನ ಬಗೆ ಹೇಗೆ?**

ಕೋವಿಡ್–19 ಜಗತ್ತಿನ ಮೇಲೆ ಪರಿಣಾಮ ಬೀರಿದೆ. ಕರ್ನಾಟಕವು ಪ್ರವಾಸೋದ್ಯಮ ಆಧರಿಸಿ ಅರ್ಥಿಕತೆ ರೂಪಿಸಿಕೊಂಡಿರುವ ರಾಜ್ಯವಲ್ಲ. ಕೋವಿಡ್ ಬಗ್ಗೆ ಜನರಿಗೆ ಮುಂಚಿನ ಭಯ ಈಗ ಇಲ್ಲ. ಪ್ರವಾಸೋದ್ಯಮ ನಿಧಾನವಾಗಿ ಚೇತರಿಸಿಕೊಳ್ಳುತ್ತಿದೆ. ಟೂರಿಸ್ಟ್ ಗೈಡ್‌ಗಳು, ಹೋಟೆಲ್‌ಗಳವರು, ಟ್ಯಾಕ್ಸಿಯವರು, ಅಮ್ಯೂಸ್‌ಮೆಂಟ್ ಪಾರ್ಕ್‌ನವರ ಚಟುವಟಿಕೆ ಆರೇಳು ತಿಂಗಳಿನಿಂದ ಬಂದ್ ಆಗಿತ್ತು. ಅವರ ಸಂಕಷ್ಟ ಪರಿಹರಿಸಲು ಗಮನ ಹರಿಸಲಾಗಿದೆ.

◆ **ಪ್ರವಾಸಿಗರ ಆಕರ್ಷಣೆಗೆ ರೂಪಿಸಿರುವ ಮಾರ್ಗಗಳೇನು?**

‘ಸರ್ವೈವಲ್’ (ಪ್ರವಾಸಿ ಸ್ಥಳಗಳಲ್ಲಿ ಸ್ಥಳೀಯರಿಗೆ ಜೀವನೋಪಾಯ ಮಾರ್ಗ ಕಲ್ಪಿಸುವುದು) ಮತ್ತು ‘ರಿವೈವಲ್’ (ಹೊರ ರಾಜ್ಯದ ಪ್ರವಾಸಿಗರ ಆಕರ್ಷಣೆ ಪುನಶ್ಚೇತನಗೊಳಿಸುವುದು) ಪರಿಕಲ್ಪನೆಗಳಿಗೆ ಆದ್ಯತೆ ನೀಡಿದ್ದೇವೆ.

‘ಸರ್ವೈವಲ್’ ಪರಿಕಲ್ಪನೆಯಡಿ ಸ್ಥಳೀಯರನ್ನು ಪ್ರವಾಸಿ ತಾಣಗಳಿಗೆ ಸೆಳೆಯಲು ‘ಲವ್ ಯುವರ್ ನೇಟಿವ್’ ಪರಿಚಯಿಸಿದ್ದೇವೆ. ತಮ್ಮ ಜಿಲ್ಲೆಯ ಅಪರೂಪದ ಸ್ಥಳಗಳ ಶಾರ್ಟ್ ವಿಡಿಯೊ ಮಾಡಿ ಸಾಮಾಜಿಕ ಮಾಧ್ಯಮದಲ್ಲಿ ಶೇರ್ ಮಾಡುವಂತೆ ಪ್ರೇರೇಪಿಸಿದ್ದೇವೆ. ಬಹಳಷ್ಟು ಮಂದಿ ವಿಡಿಯೊ ಶೇರ್ ಮಾಡಿದ್ದು, ಉತ್ತಮ ಸ್ಪಂದನ ವ್ಯಕ್ತವಾಗಿದೆ. ‘ರಿವೈವಲ್’ ಪರಿಕಲ್ಪನೆಯಡಿ, ‘ನಿಮ್ಮ ಸುರಕ್ಷತೆ, ನಮ್ಮ ಜವಾಬ್ದಾರಿ’ ಎಂದು ಘೋಷಿಸಿ, ಹೊರ ರಾಜ್ಯದ ಪ್ರವಾಸಿಗರ ಆಕರ್ಷಣೆಗೆ ಗಮನ ಹರಿಸಿದ್ದೇವೆ. ಸುರಕ್ಷತಾ ಕ್ರಮಗಳು, ಪ್ರವಾಸ ಪ್ಯಾಕೇಜ್ ಕುರಿತು ಜಾಹೀರಾತು ನೀಡಿ ಸೆಳೆಯಲು ಕ್ರಮ ವಹಿಸಿದ್ದೇವೆ.

◆ **ಪ್ರವಾಸ ಚಟುವಟಿಕೆಯ ಯೋಜನೆಗಳು ಏನಿವೆ?**

ಸಂಪರ್ಕ, ಆತಿಥ್ಯ, ಚಟುವಟಿಕೆಗೆ (ಕನೆಕ್ಟಿವಿಟಿ, ಹಾಸ್ಪಿಟಾಲಿಟಿ, ಆಕ್ಟಿವಿಟಿ) ಈ ಮೂರು ಅಂಶಗಳಿಗೆ ಒತ್ತು ನೀಡಲಾಗಿದೆ.

ಬಹುರಾಷ್ಟ್ರೀಯ ಸಂಸ್ಥೆಗಳ ಉದ್ಯೋಗಿಗಳಿಗೆ ಮನೆಯಿಂದಲೇ (ವರ್ಕ್ ಫ್ರಂ ಹೋಂ) ಕೆಲಸ ಮಾಡಲು ಅವಕಾಶ ನೀಡಿವೆ. ಉದ್ಯೋಗಿಗಳು ಪ್ರವಾಸಿ ತಾಣಗಳಿಂದ ಕೆಲಸ ಮಾಡಲು ಅನುಕೂಲವಾಗುವಂತೆ ‘ಸ್ಪೀಡಿ ವೈಫೈ’ ಮೊದಲಾದವನ್ನು ಕಲ್ಪಿಸಿ ಪೂರಕ ವಾತಾವರಣ ಸೃಷ್ಟಿಸಲು ಕಾರ್ಯಗತರಾಗಿದ್ದೇವೆ.

‘ಡೆಸ್ಟಿನೇಷನ್ ವೆಡ್ಡಿಂಗ್’ (ಕುಟುಂಬದವರು ತಾಣವೊಂದಕ್ಕೆ ತೆರಳಿ ವಿವಾಹ ನೆರವೇರಿಸಿಕೊಂಡು ಬರುವುದು) ಟ್ರೆಂಡ್ ಶುರುವಾಗಿದೆ. ಬೆಂಗಳೂರಿನ ಸುತ್ತಲಿನ ತಾಣಗಳಲ್ಲಿ ಪ್ರಾಯೋಗಿಕವಾಗಿ ಅವಕಾಶ ನೀಡಲು ಚಿಂತನೆ ನಡೆದಿದೆ. ‘ಗೇಟ್ ವೇ ಬೆಂಗಳೂರು’ ಯೋಜನೆಗೆ ತಯಾರಿ ಶುರುವಾಗಿದೆ. ಹಂಪಿ ಬಳಿ ‘ಬಂಜಾರ ಗ್ರಾಮ’ ರೂಪಿಸುವ, ಜೋಗ ಜಲಪಾತವನ್ನು ಸರ್ವಋತು ತಾಣವವಾಗಿಸುವ, ‘ಹಂಪಿ ಇನ್ ನೈಟ್ಸ್’ ಯೋಜನೆ ರೂಪಿಸಲಾಗಿದೆ.

◆ **ಪ್ರವಾಸಿ ತಾಣಗಳ ಮಾಹಿತಿ ಒದಗಿಸಲು, ಪ್ರವಾಸಿ ತಾಣಗಳಲ್ಲಿ ಮೂಲಸೌಕರ್ಯ ಕೊರತೆ ಕಲ್ಪಿಸಲು ಏನೇನು ಕ್ರಮ ಕೈಗೊಳ್ಳಲಾಗಿದೆ?**

ಪ್ರವಾಸಿ ತಾಣಗಳಲ್ಲಿ ಮೂಲಸೌಕರ್ಯ ಒದಗಿಸಲು ಸಾರ್ವಜನಿಕ–ಖಾಸಗಿ ಸಹಭಾಗಿತ್ವದಲ್ಲಿ (ಪಿಪಿಪಿ) ಕ್ರಮ ವಹಿಸಲಾಗುವುದು. ಪ್ರವಾಸೋದ್ಯಮ ಹೊಸ ನೀತಿಯಲ್ಲಿ ಅದಕ್ಕೆ ಆದ್ಯತೆ ನೀಡಲಾಗಿದೆ. ಪ್ರವಾಸಿ ತಾಣಗಳ ಸಮಗ್ರ ಮಾಹಿತಿಯನ್ನು ವೆಬ್‌ಸೈಟ್‌ಗಳಲ್ಲಿ ಅಪ್‌ಡೇಟ್ ಮಾಡಲಾಗುತ್ತಿದೆ. ಈ ತಂತ್ರಜ್ಞಾನ ಯುಗದಲ್ಲಿ ಬೆರಳ ತುದಿಯಲ್ಲೇ ಮಾಹಿತಿ ಪಡೆಯಬಹುದು.

◆ **ಹೊಸ ಪ್ರವಾಸೋದ್ಯಮ ನೀತಿ ಅನುಷ್ಠಾನ ಯಾವಾಗ?**

ಹೊಸ ಪ್ರವಾಸೋದ್ಯಮ ನೀತಿ ರೂಪಿಸಲಾಗಿದೆ. ಮುಂದಿನ ಐದು ವರ್ಷಕ್ಕೆ (2020–2025) ನೀತಿ ಜಾರಿಯಲ್ಲಿರುತ್ತದೆ. ಸುಸ್ಥಿರ ಪ್ರವಾಸೋದ್ಯಮ, ವೈವಿಧ್ಯಮಯ ಪ್ರವಾಸ (ಸಾಹಸ, ಕೃಷಿ, ಸಂಸ್ಕೃತಿ, ಪರಂಪರೆ, ಗ್ರಾಮೀಣ, ಸಂಸ್ಕೃತಿ, ಪರಿಸರ), ಪ್ರವಾಸೋದ್ಯಮಕ್ಕೆ ಉತ್ತೇಜನ ಎಲ್ಲ ಅಂಶಗಳನ್ನು ಒಳಗೊಂಡಿದೆ. ಇದೇ 27ರಿಂದ ಸಾರ್ವತ್ರಿಕರಣಗೊಳಿಸುತ್ತೇವೆ.

ಪ್ರತಿ ಜಿಲ್ಲೆಗೊಂದು ಪ್ರವಾಸೋದ್ಯಮ ನೀತಿ ರೂಪಿಸಲು ಮುಂದಾಗಿದ್ದೇವೆ. ಪ್ರಾಯೋಗಿಕವಾಗಿ ಚಿಕ್ಕಮಗಳೂರು ಜಿಲ್ಲಾ ಪ್ರವಾಸೋದ್ಯಮ ನೀತಿ ರೂಪಿಸುವ ಕಾರ್ಯ ಕೈಗೆತ್ತಿಕೊಳ್ಳಲಾಗಿದೆ. ಪಶ್ಚಿಮಘಟ್ಟ ಪ್ರವಾಸೋದ್ಯಮ ನೀತಿ ಪ್ರತ್ಯೇಕವಾಗಿ ರೂಪಿಸಲಾಗುವುದು.

◆ **ಪ್ರವಾಸಿ ತಾಣಗಳಲ್ಲಿ ಅಕ್ರಮಗಳಿಗೆ ಕಡಿವಾಣಕ್ಕೆ ಏನು ಕ್ರಮ?**

ಪ್ರವಾಸಿ ತಾಣಗಳಲ್ಲಿನ ಚಟುವಟಿಕೆಗಳ ನಿಗಾಕ್ಕೆ ಒಂದು ವ್ಯವಸ್ಥೆ ರೂಪಿಸಲಾಗುವುದು. ನಿಯಮ ಉಲ್ಲಂಘಿಸಿದವರಿಗೆ ದಂಡ ವಿಧಿಸುವುದು, ಕ್ರಮ ಜರುಗಿಸುವುದು ಕಟ್ಟುನಿಟ್ಟಾಗಿ ಜಾರಿಯಾದರೆ ಭಯ ಮೂಡುತ್ತದೆ. ತಾಣಗಳಲ್ಲಿ ಪ್ರವಾಸಿಸ್ನೇಹಿ ವಾತಾವರಣ ಸೃಷ್ಟಿಸಲಾಗುವುದು. ■